ಒಪ್ಪಿಕೊಳ್ಳಬೇಕಾಗುತ್ತದೆ. ಇದನ್ನು ಮಾನ್ಯ ಉಪ ಮುಖ್ಯಮಂತ್ರಿಯವರು ಮಾಡುತ್ತಾರೆ. ಇದರ ಜೊತೆಗೆ ಕೆಲವು ಬೆಳೆಗಳು ಏನು ಸೇರಬೇಕು, ಅದರಲ್ಲಿ ಕೇಂದ್ರ ಸರ್ಕಾರದವರು ಕಳೆದ ಸಾರಿ ಹತ್ತಿಯನ್ನು ಸೇರಿಸಿರಲಿಲ್ಲ. ಈ ಸಲ ಹತ್ತಿ ಬಂದಿದೆ. ಹಾಗೆ ಹೊಸ ಹೊಸ ಬೆಳೆಗಳನ್ನು.....

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಅಧ್ಯಕ್ಷರೇ, ಈಗ 31ನೇ ತಾರೀಖು ಎಂದು ಏನು ಲಾಸ್ಟ್ ಡೇಟ್ ಇದೆ, ಯಾವ್ಯಾವ ಕ್ರಾಪ್ ಮೇಲೆ ಪ್ರೀಮಿಯಮ್ ಹಣವನ್ನು ತುಂಬಬೇಕಲ್ಲಾ, ಆ ಕ್ರಾಪ್ ಸಿಸ್ಟಂ ಅನ್ನು ಕಂಟಿನ್ಯೂ ಮಾಡಬೇಕು. ಕೆಲವೊಂದು ಕ್ರಾಪ್‌ಗಳನ್ನು ತೆಗೆದುಬಿಡುತ್ತಾರೆ.

ಶ್ರೀ ಹೆಚ್.ಕೆ. ಪಾಟೀಲ್ : ಇಲ್ಲ, ಯಾವುದನ್ನೂ ತೆಗೆದಿಲ್ಲ, ಈ ಸಾರಿ ಹತ್ತಿ ಒಂದು ಜಾಸ್ತಿ ಮಾಡುತ್ತಾರೆ.

ಶ್ರೀ ಜಗದೀಶ್ ಶೆಟ್ಟರ್ : ಒಮ್ಮೊಮ್ಮೆ ಕೆಲವು ಐಟಂಗಳನ್ನು ತೆಗೆದುಬಿಡುತ್ತಾರೆ. ಅವುಗಳನ್ನು ಯಾವುದೂ ತೆಗೆಯದ ಹಾಗೆ ಟೈಮ್ ಎಕ್ಸ್‌ಟೆನ್‌ಶನ್ ಆಗಬೇಕು.

ಅಧ್ಯಕ್ಷರು : ಈಗ ಬೇಡಿಕೆಗಳ ಮೇಲೆ ಆದ ಚರ್ಚೆಗೆ ಉತ್ತರ.

ಶ್ರೀ ಹೆಚ್.ಕೆ. ಪಾಟೀಲ್ : ಮಾನ್ಯ ಅಧ್ಯಕ್ಷರೇ, ಬೇಡಿಕೆಗಳ ಮೇಲೆ ಉತ್ತರವನ್ನು ಪ್ರಾರಂಭ ಮಾಡುವ ಮೊದಲು, ಚುನಾವಣಾ ಪ್ರಸ್ತಾವ ಇದೆ.

3. ಚುನಾವಣಾ ಪ್ರಸ್ತಾವ

(ಅ) ಶ್ರೀ ಹೆಚ್.ಕೆ. ಪಾಟೀಲ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು): ಮಾನ್ಯ ಅಧ್ಯಕ್ಷರೇ, ಈಗಾಗಲೇ ದಿ: 19.7.2005ರಂದು ವಿಧಾನಸಭೆಯ ವಿವಿಧ ಸಮಿತಿಗಳನ್ನು ರಚಿಸಲು ಚುನಾವಣಾ ಪ್ರಸ್ತಾವವನ್ನು ಮಂಡಿಸಿದ್ದು, ಚುನಾವಣಾ ಕಾರ್ಯಕ್ರಮ ವೇಳಾಪಟ್ಟಿಯನ್ನು ಹೊರಡಿಸಲಾಗಿರುತ್ತದೆ. ಅದರಂತೆ ವಿಧಾನಸಭೆಯ ವಿವಿಧ ಸಮಿತಿಯ ಸಭೆಗಳಿಗೆ ಮಾನ್ಯ ಸದಸ್ಯರುಗಳನ್ನು ನಾಮನಿರ್ದೇಶನ ಮಾಡಲು ಈ ಸದನವು ಮಾನ್ಯ ಸಭಾಧ್ಯಕ್ಷರಿಗೆ ಅಧಿಕಾರವನ್ನು ನೀಡಬೇಕೆಂದು ಕೋರುತ್ತೇನೆ.

ಅಧ್ಯಕ್ಷರು : ಪ್ರಸ್ತಾವ ಏನೆಂದರೆ:– "ವಿಧಾನಸಭೆಯ ವಿವಿಧ ಸಮಿತಿಗಳಿಗೆ ಮಾನ್ಯ ಸದಸ್ಯರುಗಳನ್ನು ನಾಮನಿರ್ದೇಶನ ಮಾಡಲು ಈ ಸದನವು ಸನ್ಮಾನ್ಯ ಸಭಾಧ್ಯಕ್ಷರಿಗೆ ಅನುಮತಿಯನ್ನು ನೀಡುವುದು."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಆ) ಶ್ರೀ ಹೆಚ್.ಕೆ. ಪಾಟೀಲ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು):– ಮಾನ್ಯ ಅಧ್ಯಕ್ಷರೇ,

"ಅಂಗವಿಕಲರ ಅಧಿನಿಯಮ 1995ನ್ನು ಅನುಷ್ಠಾನಗೊಳಿಸಲು ರಚಿಸಲಾಗಿರುವ ರಾಜ್ಯ ಸಮನ್ವಯ ಸಮಿತಿಗೆ, ಅಂಗವಿಕಲರ ಅಧಿನಿಯಮದ ಕಲಂ 13(2)(ಜಿ) ರಲ್ಲಿನ ಅವಕಾಶದಂತೆ ಇಬ್ಬರು ಸದಸ್ಯರನ್ನು ಚುನಾಯಿಸಲು ದಿನಾಂಕ 4.7.2005ರಂದು ಪ್ರಸ್ತಾವನೆಯನ್ನು ಮಂಡಿಸಿದ್ದು ಚುನಾವಣಾ ಕಾರ್ಯಕ್ರಮದ ವೇಳಾಪಟ್ಟಿಯನ್ನು ಹೊರಡಿಸಲಾಗಿರುತ್ತದೆ. ಅದರಂತೆ ಅಂಗವಿಕಲರ ರಾಜ್ಯ ಸಮನ್ವಯ ಸಮಿತಿಗೆ ಇಬ್ಬರು ಸದಸ್ಯರನ್ನು ನಾಮನಿರ್ದೇಶನ ಮಾಡಲು ಈ ಸದನವು ಮಾನ್ಯ ಸಭಾಧ್ಯಕ್ಷರಿಗೆ ಅಧಿಕಾರವನ್ನು ನೀಡಬೇಕೆಂದು ಕೋರುತ್ತೇನೆ.